“ನೀವು ಎಷ್ಟೊಂದು ಒಳ್ಳೆಯವರು ಆಲ್ಬರ್ಟ್! ಆದರೂ... ಇದು ಅಗತ್ಯವಿರಲಿಲ್ಲ.” ತೃಪ್ತಿಯಿಂದ ಹೇಳಿದಳು ಮೇಬಲ್.

“ನನ್ನ ಅದೃಷ್ಟ ಚೆನ್ನಾಗಿರುವಂತೆ ಕಾಣಿಸುತ್ತೆ ಕಣೆ ಮೇಬಲ್. ನಾನು ಮೂರು ಬಾರಿ ಮಗೂಗೆ ಉಣಿಸಿದೆ ಅಷ್ಟೇ. ಫಲಿತಾಂಶ ನಿನ್ನ ಕಣ್ಣೆದುರಿಗೇ ಇದೆ. ಮಗುಗೆ ಮುಂದಿನ ಫೀಡ್ ಎರಡು ಗಂಟೆಗೆ ತಾನೇ? ನಾನದನ್ನು ಈಗಾಗಲೇ ತಯಾರು ಮಾಡಿದ್ದೇನೆ. ನೀನು ಅಡುಗೆಮನೆಗೆ ಹೋಗಿ ಬಿಸಿ ಮಾಡಿ ತರುವುದೊಂದೇ ಬಾಕಿ. ನೋಡು, ನಿನ್ನ ಸಮಯವನ್ನು ಎಷ್ಟೊಂದು ಉಳಿಸಿದ್ದೇನೆ ಅಲ್ವ?”

ಮೇಬಲ್ ತೊಟ್ಟಿಲಿನ ಬದಿಯಿಂದ ಸರಿದು ಆಲ್ಬರ್ಟನೆಡೆಗೆ ಬಂದು ಅವನ ಕೆನ್ನೆಗೊಂದು ಮುತ್ತನೊತ್ತುತ್ತಾ, “ನೀವು ಎಷ್ಟೊಂದು ಒಳ್ಳೆಯವರು ಆಲ್ಬರ್ಟ್! ದಿನಗಳು ಕಳೆದಂತೆ ನಿಮ್ಮ ಒಂದೊಂದೇ ಸದ್ಗುಣಗಳು ಹೊರಬರುತ್ತಿವೆ. ನಾನು ಎಷ್ಟೊಂದು ಅದೃಷ್ಟಶಾಲಿ!”

★★★

ಬಹಳ ಹೊತ್ತಿನಿಂದ ಆಲ್ಬರ್ಟ್ ಜೇನ್ನೊಣಗಳ ಗೂಡುಗಳ ಬಳಿಯೇ ಕೆಲಸ ಮಾಡುತ್ತಿದ್ದವನಿಗೆ ಮೇಬಲ್ ಕೂಗಿ ಕರೆಯುತ್ತಿರುವುದು ಕೇಳಿಸಿತು. ಅವನು ತಲೆ ಎತ್ತಿ ನೋಡಿದ. ಮೇಬಲ್ ಓಡಿ ಬರುತ್ತಿದ್ದಳು. “ಆಲ್ಬರ್ಟ್, ಆಲ್ಬರ್ಟ್... ಬೇಗ ಬಾ, ಬೇಗ ಬಾ!” ಅವನು ಆತಂಕಗೊಂಡು, ಮಾಡುತ್ತಿದ್ದ ಕೆಲಸವನ್ನು ಅಲ್ಲಿಗೇ ನಿಲ್ಲಿಸಿ ಅವಳೆಡೆಗೆ ಓಡತೊಡಗಿದ.

“ಆಲ್ಬರ್ಟ್...” ಮೇಬಲ್ ಏದುಸಿರು ಬಿಡುತ್ತಾ, “ಏನಾಯ್ತು ಗೊತ್ತಾ?” ಎಂದಳು. “ನಾನು ಮಗೂಗೆ ಎರಡು ಗಂಟೆಯ ಫೀಡ್ ಮಾಡುತ್ತಿದ್ದೆ... ಏನಾಯ್ತು, ಕೇಳ್ತಿಯಾ?... ಈ ಸರ್ತಿ ಪುಟ್ಟಿ ಪೂರಾ ಬಾಟಲ್ ಖಾಲಿ ಮಾಡಿದಳು!!”

“ಏನಂದೆ?!” ಆಲ್ಬರ್ಟ್ ಹೌಹಾರಿದ.

“ಬಾಟಲೀಲಿ ಒಂದು ತೊಟ್ಟೂ ಉಳ್ಕಂಡಿಲ್ಲ!... ನಾನು ಎಷ್ಟೊಂದು ಖುಷಿಯಾಗಿದ್ದೀನಿ ಗೊತ್ತಾ ಆಲ್ಬರ್ಟ್? ಒಹ್...” ಅವನನ್ನು ಬರಸೆಳೆದು ಮೇಬಲ್ ಉಲಿದಳು. ಅವನ ಎದೆಯ ಮೇಲೆ ತಲೆ

